ಆ) ಮೇಲೆ ತಿಳಿಸಿರುವ ಹುದ್ದೆಗಳಿಲ್ಲ ನೇರ ನೇಮಕಾತಿಗೆ ಸಂಬಂಧಪಟ್ಟ ಹುದ್ದೆಗಳಾಗಿವೆ ಈ ಹುದ್ದೆಗಳನ್ನು ಅನುಕಂಪದ ನೇಮಕಾತಿಯ ನಿಯಮಗಳನ್ನು ಅನುಸರಿಸಿ ಭರ್ತಿ ಮಾಡಬಹುದಾಗಿದೆ. ಅನುಕಂಪದ ನೇಮಕಾತಿ ಕೋರಿ ಯಾವುದೇ ಅರ್ಜಿಗಳು ಇಲಾಖೆಯಲ್ಲಿ ಬಾಕಿ ಇರುವುದಿಲ್ಲ.

## ರಾಜ್ಯದಲ್ಲಿ ವಿದ್ಯುತ್ ಸಬ್‌ಸ್ಟೇಷನ್‌ಗಳನ್ನು ಪ್ರಾರಂಭಮಾಡುವುದು

2416 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಒಟ್ಟು ಎಷ್ಟು ವಿದ್ಯುತ್ ಸಬ್ ಸ್ಟೇಷನ್‌ಗಳನ್ನು ಪ್ರಾರಂಭಿಸಲು ಯೋಜಿಸಲಾಗಿತ್ತು?*

*ಆ) ಈಗಾಗಲೇ ಪ್ರಾರಂಭವಾಗಿರುವ ವಿದ್ಯುತ್ ಸಬ್ ಸ್ಟೇಷನ್‌ಗಳ ಸಂಖ್ಯೆ ಎಷ್ಟು?*

*ಇ) ಇನ್ನುಳಿದ ಸಬ್ ಸ್ಟೇಷನ್‌ಗಳನ್ನು ಪ್ರಾರಂಭಿಸದೇ ಇರಲು ಕಾರಣವೇನು?*

*ಈ) ಇವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ ( ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಒಟ್ಟು 45 ಹೊಸ ವಿದ್ಯುತ್ ವಿತರಣಾ ಕೇಂದ್ರಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿತ್ತು.

ಆ) 1996-97ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿದ್ದ ವಿದ್ಯುತ್ ವಿತರಣಾ ಕೇಂದ್ರಗಳ ಪೈಕಿ 12 ವಿದ್ಯುತ್ ವಿತರಣಾ ಕೇಂದ್ರಗಳನ್ನು ಹಾಗೂ ಈ ಮೊದಲೇ ಪ್ರಗತಿಯಲ್ಲಿದ್ದ 12 ವಿದ್ಯುತ್ ವಿತರಣಾ ಕೇಂದ್ರಗಳನ್ನು ಅಂದರೆ ಒಟ್ಟು 24 ವಿದ್ಯುತ್ ವಿತರಣಾ ಕೇಂದ್ರಗಳನ್ನು 1996-97ನೇ ಸಾಲಿನಲ್ಲಿ ಚಾಲನೆಗೊಳಿಸಲಾಗಿದೆ. ಈ ಸಾಲಿನಲ್ಲಿ (1997-98) 3 ವಿದ್ಯುತ್ ವಿತರಣಾ ಕೇಂದ್ರಗಳನ್ನು ಚಾಲನೆಗೊಳಿಸಲಾಗಿದೆ.

ಇ) ಹಲವಾರು ಕಾರಣಗಳಿಂದ ಉಳಿದ ವಿದ್ಯುತ್ ವಿತರಣಾ ಕೇಂದ್ರಗಳ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುತ್ತದೆ. ಮುಖ್ಯವಾಗಿ ಮಂಡಳಿಯ ಆರ್ಥಿಕ ಪರಿಸ್ಥಿತಿಯು, ಸಿಬ್ಬಂದಿ ಹಾಗೂ ಸಾಮಗ್ರಿಗಳ ಕೊರತೆ ಕಾರಣವಾಗಿದೆ. ಅಲ್ಲದೇ ವಿದ್ಯುತ್ ವಿತರಣಾ ಕೇಂದ್ರಗಳಿಗೆ ಬೇಕಾಗುವ ಸ್ಥಳವನ್ನು ಪಡೆಯುವಲ್ಲಿ ಜಮೀನಿನ ಮಾಲೀಕರಿಂದ ಆಗುವ ತಕರಾರು, ವಿದ್ಯುತ್ ವಿತರಣಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಪ್ರಸರಣಾ ಮಾರ್ಗಗಳನ್ನು ನಿರ್ಮಿಸುವಾಗ ಜಮೀನಿನ ಮಾಲೀಕರಿಂದ ಆಗುವ ತಕರಾರು ಅರಣ್ಯ ತೆರವು ಮಾಡುವಲ್ಲಿ ಆಗುವ ವಿಳಂಬ, ಗುತ್ತಿಗೆದಾರರಿಂದ ಆಗುವ ಕಾರ್ಯ ವಿಳಂಬ, ಮುಂತಾದ ಕಾರಣಗಳಿಂದ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುತ್ತದೆ.

ಈ) ಉಳಿದ ವಿದ್ಯುತ್ ವಿತರಣಾ ಕೇಂದ್ರಗಳ ಕಾಮಗಾರಿಗಳ ಪೈಕಿ ಬಹುತೇಕ ವಿದ್ಯುತ್ ವಿತರಣಾ ಕೇಂದ್ರಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇವುಗಳನ್ನು ಈ ಸಾಲಿನಲ್ಲಿ (1997-98) ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

## 1996-97ನೇ ಸಾಲಿನಲ್ಲಿ ಚಾಲನೆಗೊಂಡ ಸ್ಟೇಷನ್‌ಗಳ ವಿವರಗಳು

| ಕ್ರಮ ಸಂಖ್ಯೆ | ಸ್ಟೇಷನ್ | ಜಿಲ್ಲೆ | ವೋಲ್ಟೇಜ್ |
|---|---|---|---|
| 1) | ದಾವಣಗೆರೆ (ಗುತ್ತೂರು) | ಚಿತ್ರದುರ್ಗ | 400 ಕೆ.ವಿ. |
| 2) | ಹಾಸನ | ಹಾಸನ | 220 " |
| 3) | ಕಡೂರು (ತಂಗ್ಲಿ) | ಚಿಕ್ಕಮಗಳೂರು | 110 " |
| 4) | ಅಫಜಲ್‌ಪುರ | ಗುಲ್ಬರ್ಗಾ | 110 " |
| 5) | ಯಾದಗಿರಿ | ಗುಲ್ಬರ್ಗಾ | 110 " |
| 6) | ನೊಣವಿನಕೆರೆ | ತುಮಕೂರು | 110 " |
| 7) | ಲಕ್ಷ್ಮೀಪುರ | ಕೋಲಾರ | 66 " |
| 8) | ನ್ಯಾಮತಿ | ಶಿವಮೊಗ್ಗ | 66 " |
| 9) | ನಿಟ್ರಹಳ್ಳಿ | ತುಮಕೂರು | 66 " |
| 10) | ಲಕ್ಕೂರು | ಕೋಲಾರ | 66 " |
| 11) | ಸಿರ್‌ವಾರ | ರಾಯಚೂರು | 33 " |
| 12) | ಕಡಬ | ದಕ್ಷಿಣ ಕನ್ನಡ | 33 " |
| 13) | ಆಳಂದ | ಗುಲ್ಬರ್ಗಾ | 110 " |
| 14) | ಬ್ಯಾಡಗಿ | ಧಾರವಾಡ | 110 " |
| 15) | ತಮಕಾ | ಕೋಲಾರ | 66 " |
| 16) | ಕೆ.ಹೆಚ್.ಬಿ. ಕಾಲೋನಿ (ಹೂಟಗಳ್ಳಿ) | ಮೈಸೂರು | 66 " |
| 17) | ಕಿಯಾನಿಕ್ಸ್ ಸಿಟಿ | ಬೆಂಗಳೂರು | 66 " |
| 18) | ಪಂಚನಹಳ್ಳಿ | ಚಿಕ್ಕಮಗಳೂರು | 66 " |
| 19) | ಸೈದಾಪುರ | ಗುಲ್ಬರ್ಗಾ | 33 " |
| 20) | ಬೈಲಹಳ್ಳಿ | ಬೀದರ್ | 33 " |
| 21) | ಶಿರ್ವ | ದಕ್ಷಿಣ ಕನ್ನಡ | 33 " |
| 22) | ಚಿಲಕಮುಕ್ಕಿ | ರಾಯಚೂರು | 33 " |
| 23) | ವಜ್ರಬಂಡಿ | ರಾಯಚೂರು | 33 " |
| 24) | ಚಂದಕವಾಡಿ | ಮೈಸೂರು | 33 " |

**1997-98ನೇ ಸಾಲಿನಲ್ಲಿ ಚಾಲನೆಗೊಂಡ ವಿದ್ಯುತ್ ವಿತರಣಾ ಕೇಂದ್ರಗಳ ವಿವರಗಳು**

| | | |
|---|---|---|
| 1) ಮೂಡ್ಲಗಿ | ವಿಜಾಪುರ | 110 ಕೆ.ವಿ |
| 2) ಸವಣೂರು | ಧಾರವಾಡ | 110 " |
| 3) ತಂಬರಹಳ್ಳಿ | ಬಳ್ಳಾರಿ | 66 " |

**1996-97ನೇ ಸಾಲಿನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದ್ದು ಕಾರಣಾಂತರಗಳಿಂದ ಇನ್ನೂ ಚಾಲನೆಯಾಗದಿರುವ ಸ್ಟೇಷನ್‌ಗಳ ವಿವರಗಳು**

| ಕ್ರಮ ಸಂಖ್ಯೆ | ಸ್ಟೇಷನ್ | ಜಿಲ್ಲೆ | ವೋಲ್ಟೇಜ್ |
|---|---|---|---|
| 1) | ರಾಣೆಬೆನ್ನೂರು | ಧಾರವಾಡ | 220 ಕೆ.ವಿ. |
| 2) | ಹೆಚ್‌ಎಸ್‌ಆರ್ ಲೇಔಟ್ | ಬೆಂಗಳೂರು | 220 " |
| 3) | ಬಿ.ಸಿ. ರೋಡ್ | ದಕ್ಷಿಣ ಕನ್ನಡ | 110 " |
| 4) | ಬೇಲೂರು ಕೈಗಾರಿಕಾ ಕೇಂದ್ರ | ಧಾರವಾಡ | 110 " |
| 5) | ಹೊನ್ನಾವರ | ಉತ್ತರ ಕನ್ನಡ | 110 " |
| 6) | ಕಲ್ಲೂರು | ತುಮಕೂರು | 110 " |
| 7) | ಶೋರಾಪುರ | ಗುಲ್ಬರ್ಗಾ | 110 " |
| 8) | ಅನ್‌ಮೋಡು | ಉತ್ತರ ಕನ್ನಡ | 110 " |
| 9) | ಸೊರಬ | ಶಿವಮೊಗ್ಗ | 110 " |
| 10) | ಬೆಳಗಿ | ಬಿಜಾಪುರ | 110 " |
| 11) | ಏನಗದಾಳ | ಕೋಲಾರ | 66 " |
| 12) | ನಂದಗುಡಿ | ಬೆಂಗಳೂರು | 66 " |
| 13) | ತಾಯಲೂರು | ಕೋಲಾರ | 66 " |
| 14) | ಸೂಲೆಬೆಲೆ | ಬೆಂಗಳೂರು | 66 " |
| 15) | ರಾಮಪುರ | ಹಾಸನ | 66 " |
| 16) | ಮೈಲನಹಳ್ಳಿ | ಚಿತ್ರದುರ್ಗ | 66 " |

| 1 | 2 | 3 | 4 |
|---|---|---|---|
| 17) | ತೋವಿನಕೆರೆ | ತುಮಕೂರು | 66 ಕೆ.ವಿ. |
| 18) | ಗುಂಡ್ಲುಪೇಟೆ | ಮೈಸೂರು | 66 ” |
| 19) | ಸಂತೇ ಮಾರನಹಳ್ಳಿ | ಮೈಸೂರು | 66 ” |
| 20) | ದುದ್ದ | ಹಾಸನ | 66 ” |
| 21) | ಉದಯಪುರ | ಹಾಸನ | 66 ” |
| 22) | ಹೊರಕೆರ ದೇವರಪುರ | ಚಿತ್ರದುರ್ಗ | 66 ” |
| 23) | ಶೃಂಗೇರಿ | ಚಿಕ್ಕಮಗಳೂರು | 33 ” |
| 24) | ಮುರನಾಡು | ಕೊಡಗು | 33 ” |
| 25) | ಕಮಟಗಿ | ಬಿಜಾಪುರ | 33 ” |
| 26) | ಶೇಷಗಿರಿ | ಧಾರವಾಡ | 33 ” |
| 27) | ಜನವಾಡ | ಬೀದರ್ | 33 ” |
| 28) | ಕೆಂಬಾವಿ | ಗುಲ್ಬರ್ಗಾ | 33 ” |
| 29) | ಹೆಬ್ರಿ | ದಕ್ಷಿಣ ಕನ್ನಡ | 33 ” |
| 30) | ಕೊಣ್ಣೂರು | ಬೆಳಗಾಂ | 33 ” |

**ರಾಜ್ಯದಲ್ಲಿ ಪಡಿತರ ವಿತರಣೆಯಲ್ಲಿ ಕಡಿತ**

2417 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿನ ಪಡಿತರ ಚೀಟಿದಾರರಿಗೆ ದವಸಧಾನ್ಯಗಳ ವಿತರಣೆಯನ್ನು ಕಡಿತಗೊಳಿಸಲು ಕಾರಣಗಳೇನು?*
2. *ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸರಬರಾಜು ಆಗುತ್ತಿರುವ ದವಸ ಧಾನ್ಯಗಳ ಪ್ರಮಾಣವೇನು?*
3. *ರಾಜ್ಯದಲ್ಲಿ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆ ಸಮಪರ್ಕವಾಗಿ ವಿತರಣೆ ಯಾಗುತ್ತಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?*
4. *ಪಡಿತರ ಚೀಟಿದಾರರಿಗೆ ಸಮರ್ಪಕವಾಗಿ ದವಸ ಧಾನ್ಯ ಮತ್ತು ಸೀಮೇಎಣ್ಣೆ ವಿತರಣೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?*